

# ಚಂದನಕೆರೆ

■ ನರಸಿಂಹಾರೆಡ್ಡಿ ಯಂಕಾಮೋಳ

ಕಲೆ: ಸಂತೋಷ್ ಸಸಿಹಿತ್ಲು

ಚಂದ ಚಂದದ ಕೆರೆ
ನೋಡು ಚಂದನಕೆರೆ
ಅಂಕುಡೊಂಕಿಲ್ಲದ
ದುಂಡು ಕಟ್ಟೆಯ ಕೆರೆ

ಸುತ್ತಮುತ್ತಲೂ ಎಲ್ಲ
ಹಚ್ಚಹಸರಿರುವ ಕೆರೆ
ಎಲ್ಲಾ ಕಾಲಕ್ಕೂ ತಾನು
ತುಂಬಿ ತುಳುಕುವ ಕೆರೆ

ಸುತ್ತಲೂರಿನ ಹೊಲಕೆ
ನಿತ್ಯ ನೀರುಣಿಸುವ ಕೆರೆ
ಊರಿಗೆ ಹತ್ತಿರವಿರುವ
ಸುಂದರ ಸೊಬಗಿನ ಕೆರೆ

ಬಾಯಾರಿ ಬಂದವರ
ದಾಹ ತೀರಿಸುವ ಕೆರೆ
ಜಲದಲ್ಲಿನ ಜೀವಗಳ
ಸಾಕುತ ಸಲಹುವ ಕೆರೆ

ನಮ್ಮ ಹಿರಿಯರಿಂದ
ಬಾಳಿ ಬಂದಂತಹ ಕೆರೆ
ಮುಂದಿನ ಪೀಳಿಗೆಗೆ
ಹಿಂಗೇ ಉಳಿಯಲಿ ಕೆರೆ

## ಕುಂಚ ಪ್ರಪಂಚ



**ಅದಿತಿ ಹೆಚ್.ಬಿ.**
4ನೇ ತರಗತಿ,
ಶ್ರೀ ಶಂಕರ
ಸೀನಿಯರ್ ಸೆಕೆಂಡರಿ
ಸ್ಕೂಲ್, ಚೆನ್ನೈ







**ಅಮೃತಾ ಸೂರಜ್ ಪೈ**
4ನೇ ತರಗತಿ,
ಮಾಧವ ಕೃಪ ಸ್ಕೂಲ್,
ಮಣಿಪಾಲ್

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ ‘ಕುಂಚ ಪ್ರಪಂಚ’ ವಿಭಾಗಕ್ಕೆ ಕಳಿಸಿಕೊಡಿ.

**ವಿಳಾಸ:** editorsu@sudha.co.in